ಸಾಕ್ಷಿಯನ್ನು ದಿನಾಂಕಃ **06.11.2021** ರಂದು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲುಃ 2 ನೇ ಪ್ರತಿವಾದಿ ಪರವಾಗಿ ಶ್ರೀ. ಎಸ್ ಎಸ್ ವಕೀಲರಿಂದಃ-**

ನಾನು ವ್ಯವಸಾಯವನ್ನು ಮಾಡುತ್ತೇನೆ. ನನಗೆ ಖುಷ್ಕಿ ಮತ್ತು ತರಿ ಜಮೀನು ಎರಡೂ ಇರುತ್ತದೆ. 1 ನೇ ಪ್ರತಿವಾದಿ ನನಗೆ ದೂರ ಸಂಬಂಧಿಯಾಗಬೇಕು. ನನ್ನ ಮತ್ತು 1 ನೇ ಪ್ರತಿವಾದಿ ನಡುವೆ ಯಾವುದೇ ಹಣಕಾಸು ವ್ಯವಹಾರ ಇರುವುದಿಲ್ಲ. 1 ನೇ ಪ್ರತಿವಾದಿ ಯೇ ದಾವಾ ಸ್ವತ್ತಿಗೆ ಜಮೀನನ್ನು ಮಾರಾಟ ಮಾಡುತ್ತೇನೆ ಎಂದು ತಿಳಿಸಿರುತ್ತಾರೆ. 1 ಎಕರೆ 2 ಲಕ್ಷ ರೂ. ಗಳಂತೆ ಮಾತು ಕತೆ ಯಾಗಿರುತ್ತದೆ. ಅದರಂತೆ ನಾನು 1,90,000 ಗಳನ್ನು 1 ನೇ ಪ್ರತಿವಾದಿಗೆ ಕೊಟ್ಟಿರುತ್ತೇನೆ. ಕರಾರು ಕ್ರಯ ಪತ್ರ ಸಬ್ ರಿಜಿಸ್ಟ್ರಾರ್ ಕಛೇರಿಯಲ್ಲಿ ಆಗಿರುತ್ತದೆ ಸದರಿ ದಿನಾಂಕದಂದು ಅದು ಒಂದೇ ದಾಖಲೆಯಾಗಿರುತ್ತದೆ. ಲೇಟ್ ಕೋಮ್ಮೇಗೌಡರವರ ಮಗ ಶಿವಣ್ಣ ಎಂದರೆ ನಾನೇ ಎಂದರೆ ಹೌದು. ಕರಾರು ಕ್ರಯ ಪತ್ರದಂತೆ06 ತಿಂಗಳೊಳಗೆ ಕ್ರಯ ಪತ್ರ ಮಾಡಿ ಕೊಡಬೇಕೆಂದು ಒಪ್ಪಂದ ಆಗಿರು ತ್ತದೆ. ಕರಾರು ಕ್ರಯ ಪತ್ರ ಆದ ಮೇಲೆ 06 ತಿಂಗಳೊಳಗೆ ನಾನು 1 ನೇ ಪ್ರತಿವಾದಿಯನ್ನು ಕ್ರಯ ಪತ್ರ ಮಾಡಿ ಕೊಡಲು ಕೇಳಿರುತ್ತೇನೆ.. ಸದರಿ ಅವಧಿಯಲ್ಲಿ ನಾನು ಯಾವುದೇ ಲಾಯರ್ ನೋಟೀಸ್ ಕೊಟ್ಟಿರುವುದಿಲ್ಲ. ಸದರಿ ಅವಧಿಯಲ್ಲಿ ಲಾಯರ್ ನೋಟೀಸ್ ನೀಡಲು ಯಾವುದಾದರೂ ತೊಂದರೆ ಇತ್ತಾ ಎಂದರೆ ಕ್ರಯ ಪತ್ರ ಮಾಡಿ ಕೊಡುತ್ತೇನೆ ಎಂದು ಹೇಳಿದ್ದರು. ಆದ್ದರಿಂದ ಏನು ಕೊಟ್ಟಿರಲಿಲ್ಲ. ಕರಾರು ಕ್ರಯ ಪತ್ರ ಆದ 9 ತಿಂಗಳ ನಂತರ ನಾನು ಲಾಯರ್ ನೋಟೀಸನ್ನು ಕೊಟ್ಟಿರುತ್ತೇನೆ ಎಂದರೆ ಹೌದು. 1 ನೇ ಪ್ರತಿವಾದಿ ಅದಕ್ಕೆ ಪ್ರತ್ಯುತ್ತರ ಕೊಟ್ಟಿದ್ದು ಅದು ನಾನು ನ್ಯಾಯಾಲಯ ಕ್ಕೆ ಕೊಟ್ಟಿರುತ್ತೇನೆ ಎಂದರೆ ಹೌದು. ರೂ. 10000 ಹಣ ನನ್ನ ಬಳಿ ಇತ್ತು ಎಂದು ತೋರಿಸಲು ಯಾವುದೇ ಬ್ಯಾಂಕ್ ದಾಖಲೆ ಕೊಟ್ಟಿರುವುದಿಲ್ಲ. ಕರಡು ಕ್ರಯ ಪತ್ರವನ್ನು ತಯಾರು ಮಾಡಿ1 ನೇ ಪ್ರತಿವಾದಿಗೆ ನಾನು ಕಳುಹಿಸಿರುವುದಿಲ್ಲ. ನಮ್ಮ ಸುತ್ತ ಮುತ್ತಲಿನ ಊರಿನಲ್ಲಿ ಜಮೀನುಗಳು ಭೂಸ್ವಾಧೀನ ಆಗಿರುತ್ತದೆ ಎಂದರೆ ಹೌದು. 1 ಎಕರೆಗೆ ಸರ್ಕಾರದವರು 35 ಲಕ್ಷ ನಿಗದಿಪಡಿಸಿರುತ್ತದೆ ಎಂದರೆ ಸರಿಯಲ್ಲ. ದಾವಾ ಸ್ವತ್ತು ತರಿ ಜಮೀನು ಎಂದರೆ ಹೌದು. ಕ್ರಯದ ಕರಾರು ಪತ್ರದಲ್ಲಿ ದಾವಾಸ್ವತ್ತು ತರಿ ಜಮೀನು ಅಥವಾ ಖುಷ್ಕಿ ಜಮೀನು ಎಂದು ಹೇಳಿರುವುದಿಲ್ಲ. ಮಳೆ ಆಶ್ರಿತ ಜಮೀನು ಆಗಿರುತ್ತದೆ. ನಾನು ಪ್ರತಿವಾದಿಗಳಿಗೆ ಸಾಲವನ್ನು ಕೊಟ್ಟು ನಿಪಿ 1 ಕ್ರಯದ ಕರಾರು ಪತ್ರವನ್ನು ಬರೆಸಿಕೊಂಡಿರುತ್ತೇನೋ ಹೊರತು ನಿಜವಾದ ಕ್ರಯದ ಕರಾರು ಪತ್ರವನ್ನು ಬರೆಸಿಕೊಂಡಿರುವುದಿಲ್ಲ ಎಂದರೆ ಸರಿಯಲ್ಲ. ಒಂದು ಪಕ್ಷ ನಾನು ನಿಜವಾದ ಕರಾರು ಪತ್ರವನ್ನು ಬರೆಸಿಕೊಂಡಿದ್ದರು ಉಳಿದ 10 ಸಾವಿರ ರೂ. ಗಳನ್ನು

ಇಟ್ಟು ಕೊಂಡು ಸದಾ ತಯಾರಾಗಿರುತ್ತಿದ್ದರು ಎಂದರೆ ಆಗಲೂ ತಯಾರಾಗಿದ್ದೆ. ಈಗಲೂ ಸಹ ತಯಾರಾಗಿದ್ದೆ. 35 ಲಕ್ಷ ರೂ. ಜಮೀನನ್ನು 2 ಲಕ್ಷ ರೂ. ಗಳಿಗೆ ಕೊಡುವಂತಹ ಅವಶ್ಯಕತೆ ಇರಲಿಲ್ಲ. ನಾನು ಸಾಲವನ್ನು ಕೊಟ್ಟು ಕ್ರಯದ ಕರಾರು ಬರೆಸಿಕೊಂಡಿರುತ್ತೇನೆ ಎಂದರೆ ಸರಿಯಲ್ಲ. ಪ್ರತಿವಾದಿಗಳು ಪಡೆದುಕೊಂಡಿರುವಂತಹ ರೂ. 1,90,000 ಸಾಲದ ಮೊತ್ತಕ್ಕೆ ಸರ್ಕಾರಿ ಬಡ್ಡಿ ರೀತಿ ವಾಪಸ್ಸು ಕೊಡಲು ಪ್ರತಿವಾದಿಗಳು ತಯಾರಿರುತ್ತಾರೆ ಎಂದರೆ ನನಗೆ ದುಡ್ಡು ಬೇಕಾಗಿರುವುದಿಲ್ಲ.

ಮರು ವಿಚಾರಣೆಃ ಇಲ್ಲ

ನನ್ನ ಉಕ್ತಲೇಖನದ ಮೇರೆಗೆ ತೆರದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.

ಓ ಹೇ ಕೇ ಸ ಇದೆ ಎಂ ಒ
ಸಹಿ/-
ಪ್ರಧಾನ ಸಿ.ಜೆ ಮತ್ತು ಪ್ರದನ್ಯಾದಂ,
ನಂಜನಗೂಡು